ನಡುವೆ ಮಾನಸಿಕ ಘರ್ಷಣೆ ಇದ್ದರೂ 'ಭಾವುಕತೆ'ಯ ನಷ್ಟ ಅಲ್ಲಿ ಎದ್ದುಕಾಣುತ್ತದೆ. ವೇಶ್ಯೆಯರ ಸಮಸ್ಯೆಗಳೋ ಅಥವಾ ಪ್ರತಿಭಟನೆಯ ಸಂಕೇತಗಳೋ ತಿಳಿಯುವುದಿಲ್ಲ. 'ತಿರಾಮಿಸು' ಕಥೆಯ ವಸ್ತು ಕೊಂಚ ಹೊಸದಾದರೂ ನಿರ್ವಹಣೆಯಲ್ಲಿ ಮಾಗಬೇಕಾಗಿತ್ತು. ಶಶಿಯವರು ಕಥೆಯನ್ನು ಹೇಳುವಾಗ ಪಾತ್ರಗಳು, ವಿವರಗಳು ಮತ್ತು ಭಾಷೆಯ ಸೂಕ್ಷ್ಮತೆಗಳನ್ನು ಸರಿಯಾದ ಬಗೆಯಲ್ಲಿ ಗ್ರಹಿಸದೇ ಹೋದರೆ ಕಷ್ಟ. ದಾದಾಪೀರ್ ಜೈಮನ್ ಹಲವು ಬಾರಿ ಇದೇ ಸಮಸ್ಯೆಯನ್ನು ಎದುರಿಸಿದರೂ, ಭಾವುಕತೆಯ ಗಟ್ಟಿತನದಿಂದ ಪಾರಾಗುತ್ತಾರೆ. ದಾದಾಪೀರ್‌ಗೆ ಹಳ್ಳಿ ಮತ್ತು ನಗರಗಳ ದ್ವಂದ್ವ ತಿಳಿದಿದೆ. ಹಿಂದೆ ಹೇಳಿದಂತೆ ಕುಗ್ರಾಮದಿಂದ ಬಂದ ಯಾವುದೇ ವ್ಯಕ್ತಿಗೆ ತನ್ನ ಬೇರುಗಳಿಂದ ಕಳಚಿಕೊಳ್ಳುವ ಉಮೇದು ಇರುವುದಿಲ್ಲ. ಆದರೆ, ವೇಗದ ಜೀವನ ಅವನನ್ನು ಅನೇಕ ಬಿಕ್ಕಟ್ಟುಗಳಿಗೆ ಸಿಲುಕಿಸುತ್ತದೆ. ನವ್ಯದ ಪಾತ್ರಗಳು ಇದಕ್ಕೆ ಬಹುದೊಡ್ಡ ನಿದರ್ಶನ. ಸದ್ಯದ ನಗರ–ಹಳ್ಳಿಯ ದ್ವಂದ್ವಗಳು ಬೇರೆಯಾಗಿವೆ ಅನಿಸುತ್ತದೆ. ಅಲ್ಲೊಂದು ವಿಚಿತ್ರವಾದ ಸಂಘರ್ಷವಿದೆ. ಬಿಟ್ಟು ಬಂದ ಬೇರುಗಳು ತಾಕದೇ, ಇತ್ತ ವೇಗವೇ ಬದುಕಾಗಿರುವ ನಗರದಲ್ಲಿ ಹೊಂದಾಣಿಕೆಯಾಗದೇ ಒದ್ದಾಡುವ ಅತಂತ್ರ ಸ್ಥಿತಿ ಎದುರಾಗಿದೆ. ಆರ್ಥಿಕತೆ ಎಂಬುದು ಯಾವ ಸಿದ್ಧಾಂತಗಳ ಕೈಗೂ ಸಿಗುತ್ತಿಲ್ಲವೇನೋ ಎಂಬ ಅನುಮಾನವೂ ಇದೆ. ಮಾರುಕಟ್ಟೆ ತನ್ನ ಬಾಹುಗಳನ್ನು ಚಾಚಿಕೊಳ್ಳುತ್ತಾ ಮನುಷ್ಯನನ್ನು ಭಾವುಕತೆಯಿಂದ ದೂರ ಸರಿಸುತ್ತಿದೆ. ಸದ್ಯದ ಸ್ಥಿತಿಯಲ್ಲಿ ಮಾರುಕಟ್ಟೆ ಮತ್ತು ಉದ್ಯೋಗಗಳು ಮನುಷ್ಯ ಸಂಬಂಧಗಳನ್ನು ತಮ್ಮ ಹತೋಟಿಗೆ ತಂದುಕೊಳ್ಳುತ್ತಿವೆ. ಇಲ್ಲಿ ಮೌಲ್ಯಗಳೇನಿದ್ದರೂ ನೆಪ ಮಾತ್ರವಷ್ಟೇ. ವಿಜಯ್ ಹೂಗಾರ್‌ರ 'ಒಂದು ಖಾಲಿ ಕುರ್ಚಿ' ಈ ನಿಟ್ಟಿನಲ್ಲಿ ಗಮನ ಸೆಳೆಯುವ ಕಥೆ. ಕಂಪನಿಯ ನಿಯಮಗಳು, ಸ್ನೇಹ, ಒತ್ತಡ, ಪೈಪೋಟಿ, ವೈಯಕ್ತಿಕ ಬದುಕು ಇವೆಲ್ಲವೂ ಸಾವನ್ನೂ ಮೀರಿಸಿವೆ. ಅಲ್ಲಿ ಸಾವು ಮಾನವೀಯತೆಯ ಮತ್ತು ವ್ಯಾಕುಲತೆಯ ತೆಕ್ಕೆಯಲ್ಲಿಲ್ಲ; ಬದಲಿಗೆ ವೇಗದ ಬದುಕಿಗೆ ಸಿಲುಕಿದೆ. ನಿರಾಳತೆ ತನ್ನ ಅರ್ಥವನ್ನು ನೀಗಿಕೊಂಡು, ಪ್ರೇಮ ಬರೀ ಮಾತಿನಲ್ಲಿ ಬಂಧಿಯಾಗಿದೆ.

ದಾದಾಪೀರ್‌ರ 'ಜಾಲಗಾರ' ಕಥೆ ನೋಡಿ. ಹೆಂಡತಿಯನ್ನು ನೆನೆದು ವರ್ತಮಾನದ ಬದುಕನ್ನು ಸ್ವಗತದಲ್ಲಿ ನೆನೆಯುವ ಚಿತ್ರಗಳಿವೆ. ತಾನು ಮಾಡುವ ಕಾಯಕ ತನ್ನ ಮಟ್ಟಿಗೆ ಪ್ರಾಮಾಣಿಕವಾದುದು ಎಂದು ನಂಬಿದ ಮನುಷ್ಯ ತನ್ನ ಕೆಲಸದಲ್ಲಿ ಪರೋಕ್ಷ ವಂಚನೆ ಇದೆ ಎಂದರಿತ ಬಳಿಕವೂ ಬದಲಾಗುವ ಸೂಚನೆಗಳು ಕಾಣಲಾರವು. ನಗರದ ಬದುಕಿನ ಒತ್ತಡಕ್ಕಿಂತ ಅವನ ವೇಗಕ್ಕೆ ಹಣ ಯಾವುದೇ ರೂಪದಲ್ಲಿ ಬರಲೇಬೇಕು. ಹಣ, ಕಾಮ ಮತ್ತು ಕಾಯಕ ದೊಡ್ಡ ಮಟ್ಟದ ದರ್ಶನ ಪಡೆಯದಿದ್ದರೂ, ವಿಚಿತ್ರ ಬಗೆಯ ತಲ್ಲಣಗಳಿಂದ ಕಥೆ ಮುಖ್ಯವಾಗುತ್ತದೆ. ಕಥೆಯಲ್ಲಿ ಕೇವಲ ನಿರೂಪಣೆ ಅತಿಯಾದರೆ, ವಾಚ್ಯ ಕಥೆಯ ಕೇಂದ್ರವನ್ನು ಆಹುತಿ ಪಡೆಯಬಲ್ಲದು. ಆಸ್ಪತ್ರೆಯ ಅಂತರಂಗದಲ್ಲಿ ಮನುಷ್ಯರ ಅಂತರಂಗಗಳು ಕೊಂಚ ಮಟ್ಟಿಗಾದರೂ ಶುದ್ಧವಾಗುವ ಸಾಧ್ಯತೆಗಳು 'ಟೋಕನ್ ನಂಬರ್'ನಂಥ ಕಥೆಗಳಲ್ಲಿವೆ. ಜಾತಿಯ ಗುಂಗು, ವಲಸೆ, ಧಾರ್ಮಿಕ ವಿಷಯಗಳು ಎಲ್ಲವೂ ಕೊಂಚ ಮಟ್ಟಿಗೆ ಮಾಯವಾಗಿ ಭಾವನಾತ್ಮಕ ಕಂಪನಗಳು ಎದುರಾಗುತ್ತವೆ. ಸೌಹಾರ್ದ ಬದುಕಿನ ಚಿತ್ರಗಳ ಬಿರುಕನ್ನು ತರುವ ದಾದಾಪೀರ್‌ರಂಥ ಕಥೆಗಾರರು ಹೊಸ ಬಗೆಯ ಅನುಭವಲೋಕವನ್ನು ಕಟ್ಟಿಕೊಳ್ಳದಿದ್ದರೆ, ತಾವು ನಿರ್ಮಾಣ ಮಾಡುವ ಕಥನಗಳಲ್ಲಿ ಏಕತಾನತೆ ಎದ್ದುಕಾಣುತ್ತದೆ. ಈ ರೀತಿಯ ದಾರಿಯನ್ನು ಹೊತ್ತುಕೊಂಡು ನಗರ ಮತ್ತು ಹಳ್ಳಿಯ ತಲ್ಲಣಗಳ ನಡುವೆ ಸುಳಿದಾಡುವ ಅನೇಕ ಕಥೆಗಾರರು ನಮ್ಮ ನಡುವೆ ಇದ್ದಾರೆ. ಅಕ್ಷಯ್ ಪಂಡಿತ್ ಕಥೆಯ ನಿರ್ಮಾಣ ಹಂತದಲ್ಲಿ ಎಡವಬಹುದು; ಆದರೆ ವಸ್ತುವಿಗೆ ತಕ್ಕ ಭಾಷೆಯನ್ನು ರೂಢಿಸಿಕೊಂಡಿದ್ದರಿಂದ 'ಬಯಲಲಿ ತೇಲುತ ನಾನು', 'ಎಲ್ಲೂ ಸಲ್ಲದವರೂ', 'ಫ್ರೀ ವೇ' – ಈ ಬಗೆಯ ಕಥೆಗಳು ಭಿನ್ನತೆಯನ್ನು ಧರಿಸಿವೆ. ಹಳ್ಳಿಯ ಆತ್ಮವನ್ನು ತನ್ನ ಮಾರುಕಟ್ಟೆಯ ಗುಂಗಿನಿಂದ ನುಂಗುತ್ತಿರುವ ನಗರ; ಅಲ್ಲಿಯೇ ಬಾಲ್ಯದ ಅನುಭವಗಳನ್ನು ಪೂರೈಸಲಾಗದ ಹುಡುಗ; ಸಣ್ಣ ವ್ಯಾಪಾರದ ಮೂಲಕ ಬದುಕು ಸಾಗಿಸುವ ತಂದೆ; ಎಲ್ಲಕ್ಕೂ ಕಾರಣವಾಗಿರುವ ಜಾತ್ರೆ, ಇವೆಲ್ಲವೂ ಸದ್ಯದ ಜೀವನವನ್ನು ಬಯಲಲಿ ತೇಲಿಸುತ್ತಿವೆ. 'ಎಲ್ಲೂ ಸಲ್ಲದವರು' ಕಥೆ ತನ್ನ ಮೂಲವನ್ನು ಅನ್ವೇಷಿಸುವ ತರುಣನೊಬ್ಬ ಮತ್ತೆ ನಗರಮುಖಿಯಾಗುವ ವಸ್ತುವಿದೆ. ಅಕ್ಷಯ್ ಇದನ್ನು ವ್ಯವಧಾನದಿಂದ ನಿರೂಪಿಸುತ್ತಾರೆ. ಇಂದಿನ ತಲೆಮಾರು ನಗರ ಮತ್ತು ಹಳ್ಳಿಯ ಪರಿವರ್ತಿತಲೋಕವನ್ನು ಅರ್ಥೈಸಿಕೊಳ್ಳಲಾಗದ ಸ್ಥಿತಿಯನ್ನು ತಮ್ಮ ಕಥೆಗಳಲ್ಲಿ ಅನಾವರಣ ಮಾಡುತ್ತಿದೆ. ಇದು ಹಿಂದಿನ ಕಥನಗಳಲ್ಲಿ ಬರುವ ಲೋಕಕ್ಕಿಂತ ಬೇರೆಯ ಮುಖವನ್ನು ಕಾಣಬಹುದು. ಇದೊಂದು